OS : 71/2018
P.W-1

ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ

ದಿನಾಂಕಃ 07.12.2023 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1(ಎ,ಬಿ) ಪರ ವಕೀಲರಿಂದಃ**

ನಾನು ದಾವೆಯನ್ನು ಭಾಗಂಶ ಕೋರಿ ಸಲ್ಲಿಸಿದ್ದೇನೆ. ಹೊಲ ನಿವೇಶನ ಮನೆ ಆಸ್ತಿ ಕೋರಿ ದಾವೆ ಹಾಕಿದ್ದೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಮತ್ತು ಉಳಿದ ಆಸ್ತಿಗಳು ಒಟ್ಟು ಕಟುಂಬದಲ್ಲಿ ಖರೀದಿಸಿದ ಆಸ್ತಿಗಳು. ಪಿತ್ರಾರ್ಜಿತ ಆಸ್ತಿ ಎಂದರೆ ನಮ್ಮ ಮಾವನ ಕಡೆಯಿಂದ ಬಂದ ಆಸ್ತಿ. 3 ಎಕ್ರೆ ಹೊಲ 8 ಸೆಂಟ್ಸ ಕಣ ಅಂದರೆ ದಾವಾ ಅನುಸುಚಿ 1,2 ರ ಸದರಿ ಆಸ್ತಿಗಳು ಪಿತ್ರಾರ್ಜಿತ ನಮ್ಮ ಮಾವನ ಕಡೆಯಿಂದ ಬಂದ ಆಸ್ತಿಗಳು. ಸದರಿ ಆಸ್ತಿಗಳು ನನ್ನ ಮಾವ ಕೊಟ್ರಪ್ಪನ ಹೆಸರಿನಲ್ಲಿವೆ. ಈ ಸಂಬಂದ ನಾನು ದಾಖಲೆಗಳನ್ನು ಸಲ್ಲಿಸಿದ್ದೇನೆ. ಪಹಣಿಗಳನ್ನು ಸಲ್ಲಿಸಿದ್ದೇನೆ. ನನ್ನ ಮಾವನ ಹೆಸರಿನಲ್ಲಿ ಪಹಣಿಗಳು ಇವೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಆಸ್ತಿ ಬಿಟ್ಟು ನನ್ನ ಮಾವನ ಹೆಸರಿಗೆ ಬೇರೆ ಆಸ್ತಿಗಳು ಇಲ್ಲ. ನನ್ನ ಮಾವ ಈಗ್ಗೆ 60-70 ವರ್ಷ ಹಿಂದೆ ಮೃತಪಟ್ಟಿದ್ದಾರೆ. ನನ್ನ ಅತ್ತೆ ಗುರುಸಿದ್ದಮ್ಮ ನನ್ನ ಮಾವ ಮೃತ ಪಡುವ ಮೊದಲೇ ಮೃತಪಟ್ಟಿದ್ದಾರೆ. ನನ್ನ ಮಾವನಿಗೆ 3 ಜನ ಮಕ್ಕಳು. ಗೌರಮ್ಮ, ನಾಗಪ್ಪ, ಸಿದಪ್ಪ. ನನ್ನ ಗಂಡ ನಾಗಪ್ಪ ಮೃತಪಟ್ಟು 12 ವರ್ಷಗಳು ಆಗಿವೆ. ನನಗೆ 3 ಜನ ಮಕ್ಕಳು. ಲತಾ, ಸುಮ, ಕೊಟ್ರೇಶ. ನನ್ನ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ.

1 ನೇ ಪ್ರತಿವಾದಿ ಶಿಕ್ಷಕರಾಗಿ ಕೆಲಸ ಮಾಡುತಿದ್ದಾರೆ. ದಾವಾ ಅನುಸುಚಿ 3 ನೇ ಆಸ್ತಿ ಖರೀದಿಸುವ ಆಸ್ತಿ. ಸದರಿ ಆಸ್ತಿ ಗೌಡ್ರು ಸಿದಲಿಂಗಪ್ಪನಿಂದ ನನ್ನ ಗಂಡ ಹೆಸರಿನಲ್ಲಿ ಈಗ್ಗೆ 20 ವರ್ಷಗಳ ಹಿಂದೆ ನೊಂದಾಯಿತ ಪತ್ರವನ್ನು ಖರೀದಿಸಲಾಗಿದೆ . ಸದರಿ ದಾಖಲೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈ ಸಂಬಂದ ಯಾವುದೇ ದಾಖಲೆ ಸಲ್ಲಿಸಿದೆ ಇದ್ದರೂ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಅನುಸುಚಿ 4 ರ ಆಸ್ತಿ ನೊಂದಾಯಿತ ಕ್ರಯ ಪತ್ರದ ಮೂಲಕ ಬಸಮ್ಮನಿಂದ ನನ್ನ ಗಂಡ ಮತ್ತು 1 ನೇ ಪ್ರತಿವಾದಿ ಜಂಟಿಯಾಗಿ ಖರೀದಿಸಿದ್ದಾರೆ. ಈ ಸಂಬಂದ ನೊಂದಾಯಿತು ಖರೀದಿ ಪತ್ರ ಸಲ್ಲಿಸಿದ್ದೇನೆ . ಈ ಸಂಬಂದ ಯಾವುದೇ ದಾಖಲೆ ಸಲ್ಲಿಸಿದೆ ಇದ್ದರೂ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಅನುಸುಚಿ 5 ರ ಆಸ್ತಿ ಖರೀದಿಸಲಾಗಿದೆ ಆದರೆ ಅದರ ಬಗ್ಗೆ ಮಾಹಿತಿ ಇಲ್ಲ, ನನ್ನ ಗಂಡ ಮತ್ತು ಮೈದುನಾಗೆ ಗೊತ್ತು. ನನ್ನ ಗಂಡ ಮತ್ತು ಮೈದುನಾರವರು ಹೇಳಿದ ಮೇರೆಗೆ ದಾವಾ ಅನುಸುಚಿ 3 ರಿಂದ 5 ಆಸ್ತಿಗಳು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಗಳು ಎಂದು ಹೇಳುತಿದ್ದೆನೆ.

ದಾವಾ ಅನುಸುಚಿ 6 ರ ಮನೆ ಆಸ್ತಿ ನನ್ನ ಗಂಡ ಮತ್ತು 1 ನೇ ಪ್ರತಿವಾದಿ ಜಂಟಿಯಾಗಿ ಖರೀದಿಸಿದ್ದಾರೆ. ಈ ಸಂಬಂದ ನೊಂದಾಯಿತು ಖರೀದಿ ಪತ್ರ ಸಲ್ಲಿಸಿದ್ದೇನೆ . ಈ ಸಂಬಂದ ಯಾವುದೇ ದಾಖಲೆ ಸಲ್ಲಿಸಿದೆ ಇದ್ದರೂ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಅನುಸುಚಿ 2 ರ ಆಸ್ತಿ ಇಂದ ಯಾವುದೇ ಆದಾಯ ಬರಲ್ಲ ಎಂದರೆ ಸರಿ. ದಾವಾ ಅನುಸುಚಿ 1 ರ ಆಸ್ತಿ ಕುಷ್ಕಿ ಜಮೀನು ಎಂದರೆ ಸರಿ. ಸದರಿ ಜಮೀನಲ್ಲಿ ಎಷ್ಟು ಆದಾಯ ಬರುತಿತ್ತು ಗೊತಿಲ್ಲ, ನನ್ನ ಗಂಡನಿಗೆ ಗೊತ್ತು. ದಾವಾ ಅನುಸುಚಿ 3 ರಿಂದ 6 ಆಸ್ತಿ ಒಟ್ಟು ಕಟುಂಬದ ಆದಾಯದಿಂದ ಖರೀದಿಸಿದ್ದಾರೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕಟುಂಬದ ಆದಾಯ ಬಗ್ಗೆ ದಾಖಲೆಗಳು ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಅನುಸುಚಿ 1 ರ ಆಸ್ತಿಯಲ್ಲಿ ಅಗಸರ ಮಲಪ್ಪ ಮತ್ತು ನಾಗಪ್ಪ ರವರ ಹೆಸರು ಜಂಟಿಯಾಗಿ ಇದೆ ಎಂದರೆ ಸರಿ. ಅವರು ಅದರ ಮಾಲೀಕರು ಹೌದು ಎಂದರೆ ಸರಿ. ಈ ದಾವೆಯಲ್ಲಿ ಸದರಿಯವರನ್ನು ಸೇರಿಸಿಲ್ಲ ಎಂದರೆ ಸರಿ.

ದಾವಾ ಅನುಸುಚಿ 4 ರಿಂದ 6 ರ ಆಸ್ತಿ ನನ್ನ ಗಂಡ ಮತ್ತು 1 ನೇ ಪ್ರತಿವಾದಿ ಹೆಸರಲ್ಲಿ ಖಾತೆ ಆಗಿದೆ ಎಂದರೆ ಸರಿ. ಅದನ್ನು ನಾನು ಸಲ್ಲಿಸಿದ್ದೇನೆ . ಈ ಸಂಬಂದ ಯಾವುದೇ ದಾಖಲೆ ಸಲ್ಲಿಸಿದೆ ಇದ್ದರೂ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದ 4 ನೇ ಪ್ಯಾರಾದಲ್ಲಿ ದಾವಾ ಆಸ್ತಿಗಳು ನನ್ನ ಮಾವನಿಗೆ ಸೇರಿದ ಆಸ್ತಿಗಳು ಎಂದು ಹೇಳಿದ್ದೇನೆ ಎಂದರೆ ಸರಿ. ದಾವಾ ಅನುಸುಚಿ 3 ರಿಂದ 6 ರ ಆಸ್ತಿ ಒಟ್ಟು ಕಟುಂಬದ ಆಸ್ತಿಗಳು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿಲಾಗಿದೆ ಎಂದು ದಾವಾ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ದಾವಾ ಅನುಸುಚಿ 5 ರ ಆಸ್ತಿ ಮಲ್ಲೇಶ ಹುಲಮನಿ ತಂದೆ ಶಿವಪ್ಪ ಹುಲಮನಿ ರವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ

OS : 71/2018
P.W-1

ಸರಿ. 2 ನೇ ಪ್ರತಿವಾದಿ ಈ ದಾವೆಯಲ್ಲಿ ಯಾವ ಕಾರಣಕ್ಕೆ ಸೇರಿಸಿದ್ದೆವೆ ಎಂದು ನನಗೆ ಗೊತ್ತಿಲ್ಲ. ನಿಪಿ 4 ನೊಂದಾಯಿತವಲ್ಲದ ದಾಖಲೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.